**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 1595/2025**

**ಪಿರ್ಯಾದಿದಾರರು:** ಡಿ.ಎನ್‌ಚಂದ್ರಶೇಖರ್ ಬಿನ್ ಲೇಟ್ ನಂಜೇಗೌಡ

**ವಿರುದ್ಧ**

**ಆರೋಪಿ/ತರು:** ಜಯರಂಗೇಗೌಡ ಬಿನ್ ನಿಂಗೇಗೌಡ

**ಆಪಾದನೆ**

ಶ್ರೀಮತಿ ಕುಸುಮ ವಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಕೆಳಕಂಡ ಆರೋಪಣೆ ಹೊರಿಸುವುದೇನೆಂದರೆ,

ಈ ಪ್ರಕರಣದ ಪಿರ್ಯಾದಿಯು ನೀಡಿದ ದೂರಿನ ಆಧಾರದ ಮೇಲಿಂದ, ಆರೋಪಿಯಾದ ನೀವು ಪಿರ್ಯಾದಿರವರಿಗೆ ಪರಿಚಯದವರಿದ್ದು, ಆರೋಪಿಯಾದ ನೀವು ನಿಮ್ಮ ಮಕ್ಕಳ ವಿಧ್ಯಾಭ್ಯಾಸದ ಸಲುವಾಗಿ ಹಣದ ಅವಶ್ಯಕತೆ ಇರುವುದರಿಂದ ಪಿರ್ಯಾದುದಾರರಿಂದ ರೂ.3,00,000.00 ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಹಣದ ಭದ್ರತೆಗಾಗಿ ಕರ್ನಾಟಕ ಬ್ಯಾಂಕ್,ಲಿ. ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್ ನಂ:404557 ಅನ್ನು ರೂ. 3,00,000.00 ಮೊತ್ತಕ್ಕೆ ದಿನಾಂಕ 25-04-2025 ಕ್ಕೆ ಪಿರ್ಯಾದಿಗೆ ಕೊಟ್ಟಿದ್ದು, ದಿನಾಂಕ 25-04-2025 ರಂದು ಸದರಿ ಚೆಕ್‌ನ್ನು ಪಿರ್ಯಾದಿದಾರರು ನಗಧೀಕರಣಕ್ಕಾಗಿ ತಾನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ಸಲ್ಲಿಸಿದಾಗ "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿನಾಂಕ 28-04-2025 ರಂದು ವಾಪಸ್ಸಾಗಿರುತ್ತದೆ. ಸದರಿ ವಿಚಾರವನ್ನು ನಿಮಗೆ ತಿಳಿಸಲಾಗಿ ನೀವು ಉಡಾಫೆ ಉತ್ತರವನ್ನು ನೀಡಿರುತ್ತೀರಿ. ಆ ಬಗ್ಗೆ ಪಿರ್ಯಾದಿದಾರರು ನಿಮಗೆ ದಿನಾಂಕ 14-05-2025 ರಂದು ತಮ್ಮ ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ತಿಳುವಳಿಕೆ ಪತ್ರವು ನಿಮಗೆ ಖುದ್ದು ಜಾರಿಯಾಗಿದ್ದರೂ ಸಹ ಇಲ್ಲಿಯವರೆಗೆ ನೀವು ಚೆಕ್‌ನ ಮೊತ್ತವನ್ನು ಪಾವತಿಸಿರುವುದಿಲ್ಲ, ಕಾರಣ ನೀವು ಉದ್ದೇಶಪೂರ್ವಕವಾಗಿ ಪಿರ್ಯಾದಿದಾರರ ಹಣವನ್ನು ಕೊಡದೆ ಚೆಕ್‌ನ್ನು ನೀಡಿದ್ದರಿಂದ ಸದರಿ ಚೆಕ್ ಬ್ಯಾಂಕ್‌ನಿಂದ ನಗಧೀಕರಣಗೊಳ್ಳದೇ ಅಮಾನ್ಯಗೊಂಡಿರುತ್ತದೆ. ಆದ್ದರಿಂದ ನೀವು **ಲಿಖಿತಗಳ ವರ್ಗಾವಣೆ ಅಧಿನಿಯಮ ಕಾಯ್ದೆ ಕಲಂ: 138**ರ ಅಡಿಯಲ್ಲಿ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

1. ಮೇಲೆ ಓದಿ ಹೇಳಿದ ಆರೋಪವು ನಿಮಗೆ ಅರ್ಥವಾಯಿತೆ ?

**ಉತ್ತರ ಃ**

2. ನೀವು ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ ?

**ಉತ್ತರ ಃ**

(ಸದರಿ ಆರೋಪವನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ).

ದಿನಾಂಕಃ **03.08.2026**

(ಶ್ರೀಮತಿ. ಕುಸುಮ.ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ. .